ದಾಸರಹಳ್ಳಿ ಕೆರೆಗೆ ನೀರು ಹರಿಸುವುದು

204(4063); ಶ್ರೀ ರವಿ ಸಿ.ಟಿ (ಚಿಕ್ಕಮಗಳೂರು)

ಅ) ಚಿಕ್ಕಮಗಳೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಮಗಳೂರು ನಗರದ ಬಸವನಹಳ್ಳಿ ಕೆರೆಯಿಂದ ದಾಸರಹಳ್ಳಿ ಕೆರೆಗೆ ನೀರು ಹರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಯಾವಾಗ ಅನುಷ್ಠಾನಗೊಳಿಸಲಾಗುವುದು ಹಾಗೂ ಈ ಕಾಮಗಾರಿಗೆ ಎಷ್ಟು ಅನುದಾನ ಒದಗಿಸಲಾಗುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು.)

ಅ) ಮತ್ತು ಆ) ಈ ಕಾಮಗಾರಿಯು ಕಾವೇರಿ ಕೊಳ್ಳದ ಕೆರೆಯಿಂದ ಕೃಷ್ಣ ಕೊಳ್ಳದ ಕೆರೆಗೆ ಏತ ನೀರಾವರಿ ಯೋಜನೆಯ ಮೂಲಕ ನೀರು ತುಂಬಿಸುವುದಾಗಿದ್ದು, 2014–15ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿದೆ. ಆದರೆ ಕಾವೇರಿ ಕೊಳ್ಳದಿಂದ ಕೃಷ್ಣಾ ಕೊಳ್ಳಕ್ಕೆ ನೀರು ಹರಿಸಬೇಕಾಗಿರುವುದರಿಂದ ಈ ವಿಷಯವಾಗಿ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರಿಂದ ಅಭಿಪ್ರಾಯಪಡೆದು ಕೈಗೊಳ್ಳಬೇಕಿದೆ.

ಶ್ರೀ ಸಿ.ಟಿ. ರವಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ನಾನು ಏನು ಕೇಳಿದ್ದೆ ಎಂದರೆ; ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಮಗಳೂರು ನಗರದ ಬಸವನಹಳ್ಳಿ ಕೆರೆಯಿಂದ ದಾಸರಹಳ್ಳಿ ಕೆರೆಗೆ ನೀರು ಹರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ಎಂದು ಕೇಳಿದ್ದೇನೆ. ಅದು ಸರ್ಕಾರದ ಮುಂದಿನ ಮತ್ತು 2014–15ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅದು ಅನುಮೋದನೆಯಾಗಿದೆ ಎಂದು ಹೇಳಿದ್ದಾರೆ. ನಾನು ಎರಡನೇ ಪ್ರಶ್ನೆಯಲ್ಲಿ, ಪ್ರಸ್ತಾವನೆ ಇದ್ದಲ್ಲಿ ಅದನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ಹಾಗೂ ಈ ಕಾಮಗಾರಿಗೆ ಎಷ್ಟು ಅನುದಾನ ಒದಗಿಸಲಾಗುವುದು ಎಂದು ಕೇಳಿದ್ದೇನೆ. ಇದರ ಬಗ್ಗೆ ಅವರು ಉತ್ತರವನ್ನು ಕೊಡುವಂಥ ಕೆಲಸವನ್ನೇ ಮಾಡಿಲ್ಲ. ಈ ಕಾಮಗಾರಿಯ ಅಂದಾಜು ವೆಚ್ಚವೆಷ್ಟು? ಎಷ್ಟು ಕ್ಯೂಸೆಕ್ಸ್ ನೀರನ್ನು ಅಲ್ಲಿಗೆ ಲಿಫ್ಟ್ ಮಾಡುತ್ತೀರಿ? ನೀರಿನ ಲಭ್ಯತೆ ಎಷ್ಟಿದೆ? ಈ ವಿವರಗಳನ್ನು ಕೊಡಬೇಕು.

ಶ್ರೀ ಶಿವರಾಜ್ ಎಸ್. ತಂಗಡಗಿ:– ನಾವು ಉತ್ತರವನ್ನು ಬಹಳ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಅದಕ್ಕೆ ಈಗಾಗಲೇ 2014–15ನೇ ಸಾಲಿನಲ್ಲಿ ಎರಡು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದು ಈಗಾಗಲೇ ಅನುಮೋದನೆಯೂ ಆಗಿದೆ. ಕಾವೇರಿ ಕೊಳ್ಳದಿಂದ ಕೃಷ್ಣಾ ಕೊಳ್ಳಕ್ಕೆ ನೀರು ಹರಿಸಲು ನಮಗೆ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯವರಿಂದ (W.R.D.O.) ಒಪ್ಪಿಗೆ ಬೇಕಾಗುತ್ತದೆ. ಅಲ್ಲಿಂದ ಒಪ್ಪಿಗೆ ಬಂದ ನಂತರ ನಾವು ಕ್ರಿಯಾ ಯೋಜನೆಯನ್ನು ಮಾಡಿ, ಟೆಂಡರ್ ಪ್ರಕ್ರಿಯೆಯನ್ನು ಮಾಡುತ್ತೇವೆ. W.R.D.O.ಯ ಒಪ್ಪಿಗೆ ಸಲುವಾಗಿ ಕಾಯುತ್ತಿದ್ದೇವೆ ಎಂದು ಉತ್ತರದಲ್ಲಿ ನಾವು ಬಹಳ ಸ್ಪಷ್ಟವಾಗಿ ಕೊಟ್ಟಿದ್ದೇವೆ, ಅದನ್ನು ತಾವು ನೋಡಿಲ್ಲ. ಕಾವೇರಿ ನೀರಿನ ವಿಷಯ ಟ್ರಿಬ್ಯೂನಲ್ ಮುಂದೆ ಇರುವುದರಿಂದ W.R.D.O.ದಿಂದ ಒಪ್ಪಿಗೆ ಬರಬೇಕಾಗಿದೆ. ಒಪ್ಪಿಗೆ ಬಂದರೆ ನಾವು ಮುಂದಿನ ಕೆಲಸವನ್ನು ಮಾಡುತ್ತೇವೆ. ನಮ್ಮ ಸರ್ಕಾರಕ್ಕೂ ಅದನ್ನು ಮಾಡಬೇಕು ಎನ್ನುವ ಆಸೆಯಿದೆ. ಆದರೆ ಅದಕ್ಕೆ ಕಾನೂನು ತೊಡಕುಗಳಿವೆ. W.R.D.O.ದಿಂದ ಒಪ್ಪಿಗೆ ಬಂದರೆ ಅದನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಸಿ.ಟಿ. ರವಿ:– ಕುಡಿಯುವ ನೀರು ಕೊಡುವ ವಿಷಯದಲ್ಲಿ ಕಾನೂನಿನ ಯಾವುದೇ ತೊಡಕಿಲ್ಲ ಎಂದು ನಾನು ಕೇಳಿದ್ದೇನೆ. ಇಲ್ಲಿ ಕೆರೆಗೆ ನೀರು ಹರಿಸುವುದೂ ಕೂಡ ಕುಡಿಯುವ ನೀರಿನ ಸಲುವಾಗಿಯೇ. ಇದಕ್ಕೇನಾದರೂ ಕಾನೂನು ತೊಡಕುಗಳಿದ್ದರೆ ಅದನ್ನು ಬಗೆಹರಿಸಲು ತಾವು ಸಮರ್ಥರಿದ್ದೀರಿ, ಅದನ್ನು ಬಗೆಹರಿಸಿ, ನೀರು ಕೊಡುವಂಥ ಕೆಲಸವನ್ನು ಮಾಡಿ ಮತ್ತು ಇದಕ್ಕೆ ನಿರ್ದಿಷ್ಟವಾಗಿ ಎಷ್ಟು ಹಣವನ್ನು ತೆಗೆದಿಟ್ಟಿದ್ದೀರಿ ಎನ್ನುವುದನ್ನು ನೀವು ಉತ್ತರದಲ್ಲಿ ಸ್ಪಷ್ಟಪಡಿಸಿಲ್ಲ. ಎರಡು ಕೋಟಿ ರೂಪಾಯಿಗಳು ಎಂದು ಈಗ ನೀವು ಹೇಳಿದಿರಿ. ಅದಕ್ಕೆ ಎರಡು ಕೋಟಿ ರೂಪಾಯಿಗಳು ಸಾಕಾಗುತ್ತದೆಯೇ? ಅದಕ್ಕೆ ಎಸ್ಟಿಮೇಟ್ ಆಗಿದೆಯೇ?

ಶ್ರೀ ಶಿವರಾಜ್ ಎಸ್. ತಂಗಡಗಿ:– ನಮಗೆ W.R.D.O.ದಿಂದ ಒಪ್ಪಿಗೆ ಬಂದ ಮೇಲೆ D.P.R. ಮಾಡಿಸುತ್ತೇವೆ. ಒಪ್ಪಿಗೆ ಬಂದ ಮೇಲೆ ಎಷ್ಟು ಕ್ಯೂಸೆಕ್ಸ್ ನೀರು ಬೇಕಾಗುತ್ತದೆ? ಎಷ್ಟು ಕ್ಯೂಸೆಕ್ಸ್‌ಗೆ ಒಪ್ಪಿಗೆ ಬೇಕಾಗುತ್ತದೆ? ಎಷ್ಟು ದುಡ್ಡು ಬೇಕಾಗುತ್ತದೆ? ಎನ್ನುವುದನ್ನೆಲ್ಲ ಮಾಡುತ್ತೇವೆ. ಈಗ ನಾವು nominal ಆಗಿ ಎರಡು ಕೋಟಿ ರೂಪಾಯಿಗಳ ದುಡ್ಡನ್ನು ಇಟ್ಟು ಅದಕ್ಕೆ ಅನುಮೋದನೆಯನ್ನು ಕೊಟ್ಟಿದ್ದೇವೆ. ಈಗಿರುವ ಸಮಸ್ಯೆ ಎಂದರೆ W.R.D.O.ಯಿಂದ ಒಪ್ಪಿಗೆ ಬರಬೇಕಾಗಿರುವುದು. ಒಪ್ಪಿಗೆಗಾಗಿ ಅದನ್ನು W.R.D.O.ಗೆ ಕಳುಹಿಸಿದ್ದೇವೆ. ಒಪ್ಪಿಗೆ ಬಂದ ನಂತರ ಪೂರ್ಣ ಪ್ರಮಾಣದಲ್ಲಿ ಅದಕ್ಕೆ ಬೇಕಾದಂಥವುಗಳನ್ನೆಲ್ಲ ತಯಾರು ಮಾಡಲು ನಾವು ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು:– ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಗುವ ಉತ್ತರ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 23–03–2015ರ ಹದಿನೈದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 130 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ 20–03–2015ರ ಹದಿನಾಲ್ಕನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 221 ಪ್ರಶ್ನೆಗಳ ಪೈಕಿ 95 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು. ಪ್ರಶ್ನೋತ್ತರ ವೇಳೆ ಮುಗಿಯಿತು.

(ಅನುಬಂಧ–I) (ಭಾಗ–II) ಮತ್ತು (ಭಾಗ–III)